ಕರ್ನಾಟಕ ಸರ್ಕಾರ

(ಸಾರಿಗೆ ಇಲಾಖೆ)

ಸಂ:ಸಾಆ:ನೋಂದಣಿ-2/ಪಿಆರ್-111/14-15

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ರವರ ಕಛೇರಿ,
'ಎ' ಬ್ಲಾಕ್, 1ನೇ ಮಹಡಿ, ಟಿ.ಟಿ.ಎಂ.ಸಿ. ಕಟ್ಟಡ,
ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ,
ಬೆಂಗಳೂರು, ದಿನಾಂಕ:06-04-2024

## ಆದೇಶ

ವಿಷಯ : ಕರ್ನಾಟಕ ಮೋಟಾರು ವಾಹನ ನಿಯಮಾವಳಿ-1989ಕ್ಕೆ ತಿದ್ದುಪಡಿ ಮಾಡಿ ನಿಯಮ-46(A)ಗೆ ಹೊಸದಾಗಿ ಉಪ ನಿಯಮ-46(AA)ಅನ್ನು ಸೇರ್ಪಡೆ ಮಾಡಿ, ಸರ್ಕಾರವು ಹೊರಡಿಸಿರುವ ಅಧಿಸೂಚನೆ ಮೇರೆಗೆ **KA50/MD** ಮುಂಗಡ ಶ್ರೇಣಿಯನ್ನು ಪ್ರಾರಂಭಿಸಿ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ : ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಾರಿಇ/60/ಸಾಇಪ/2014, ದಿನಾಂಕ:29.05.2014 ಮತ್ತು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವ ದಿ:07.08.2014.

*****

ಉಲ್ಲೇಖದಲ್ಲಿ ಕಾಣಿಸಿರುವ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ-46(A)ಕ್ಕೆ ತಿದ್ದುಪಡಿ ಮಾಡಿ ನಿಯಮ-46(AA) ಅನ್ನು ಸೇರ್ಪಡೆ ಮಾಡಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮದ ಪ್ರಕಾರ, ಮೋಟಾರು ವಾಹನಕ್ಕೆ ನೋಂದಣಿ ಸಂಖ್ಯೆ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಒಂದು ಆಯ್ಕೆ ನೋಂದಣಿ ಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಿಗೊಂಡಾಗ ಹರಾಜು ಪದ್ಧತಿ ಮೂಲಕ ಹಂಚಿಕೆ ಮಾಡಲು ಕಾರ್ಯವಿಧಾನವನ್ನು ರೂಪಿಸಲು ಸಾರಿಗೆ ಆಯುಕ್ತರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

ಮೇಲ್ಕಂಡ ತಿದ್ದುಪಡಿ ನಿಯಮದಲ್ಲಿ ನಿರ್ದಿಷ್ಟಪಡಿಸಿರುವ ನೋಂದಣಿ ಸಂಖ್ಯೆಗಳು ಕೆಳಕಂಡಂತಿವೆ: 1, 123, 1234, 10, 11, 111, 1111, 100, 1000,1001 22,27, 222, 234, 2222, 2727, 33, 36, 63, 333, 3333, 3636, 45, 444, 4444, 4455, 4545, 5, 55, 555, 5454, 5555, 6, 63, 666,6666, 6055, 6363, 7, 72,77, 777, 786,7272, 7777, 8, 88, 888, 8055, 8118, 8181 ,8888, 9, 90, 99, 900, 909, 999, 9000, 9009,9090 & 9999 ಹಾಗೂ ಉಳಿದ ಸಂಖ್ಯೆಗಳಲ್ಲಿ ಯಾವುದೇ ಇಚ್ಛಿತ ನೋಂದಣಿ ಸಂಖ್ಯೆಯನ್ನು ಹಂಚಿಕೆ ಮಾಡಲು ಅವಕಾಶವಿರುತ್ತದೆ.

ಲಘು ಮೋಟಾರು ವಾಹನ (ಸಾರಿಗೇತರ ವರ್ಗದ, ಕಾರು ಜೀಪು ಇತ್ಯಾದಿ ಸ್ವಂತ ಉಪಯೋಗಕ್ಕೆ ಬಳಸುವ ವಾಹನಗಳು) ರಾಜ್ಯದ ಯಾವುದೇ ನೋಂದಣಿ ಪ್ರಾಧಿಕಾರದ ಕಛೇರಿಯಲ್ಲಿ ಹೊಸದಾಗಿ ಪ್ರಾಂಭಿಸುವ ಮುಂಗಡ ಶ್ರೇಣಿಗಳಲ್ಲಿ ಅರ್ಜಿದಾರರು ಕೋರುವ ಆಯ್ಕೆ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜು ಪದ್ಧತಿಯ ಮೂಲಕ ಹಂಚಿಕೆ ಮಾಡಲಾಗುವುದು.

ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಿರಬೇಕಾಗುತ್ತದೆ.

1. ಆಯ್ಕೆ ನೋಂದಣಿ ಸಂಖ್ಯೆ ಪಡೆಯಲು ಇಚ್ಛಿಸುವ ಅರ್ಜಿದಾರರು ವಾಹನ ಮಾರಾಟಪತ್ರ (ನಮೂನೆ-21) ಅಥವಾ Invoice ಪ್ರತಿ ಅಥವಾ ವಾಹನ ಖರೀದಿಸಲು Booking

--2

ರಸೀದಿಯೊಂದಿಗೆ ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ/ ಇ-ಮೇಲ್ ವಿಳಾಸ ಮತ್ತು ಮುಂಗಡ ಶ್ರೇಣಿಯಲ್ಲಿ ಯಾವುದೇ ಸಂಖ್ಯೆ ಪಡೆಯಲು ನಿಗದಿಪಡಿಸಿರುವ ಶುಲ್ಕ ರೂ.75,000/-ಗಳಿಗೆ ಕಾರ್ಯದರ್ಶಿ, ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಮಾಂಡ್ ಡ್ರಾಫ್ಟ್‌ನೊಂದಿಗೆ (ಸಹಕಾರಿ ಬ್ಯಾಂಕ್‌ಗಳಲ್ಲಿ ಪಡೆದ ಡಿ.ಡಿಯನ್ನು ಹೊರತುಪಡಿಸಿ) ಅರ್ಜಿಯೊಂದಿಗೆ ನೋಂದಣಿ ಸಂಖ್ಯೆಯನ್ನು ಪಡೆಯಲು ನಿಗಧಿಪಡಿಸಿದ ದಿನಾಂಕದಂದು ಸಾರಿಗೆ ಆಯುಕ್ತರ ಕಛೇರಿಯಲ್ಲಿ ನಡೆಯುವ ಬಹಿರಂಗ ಹರಾಜಿನಲ್ಲಿ ಭಾಗವಿಸತಕ್ಕದ್ದು.

2. ನಿಯಮಾನುಸಾರ ನಿಗದಿಪಡಿಸಿರುವ ಮೇಲ್ಕಂಡ ಶುಲ್ಕದ ಮೊತ್ತಕ್ಕೆ ಡಿಮಾಂಡ್ ಡ್ರಾಫ್ಟ್‌ಅನ್ನು ಸಲ್ಲಿಸದೆ ಇರುವ ಅರ್ಜಿದಾರರು ಹರಾಜು ಪ್ರಕ್ರಿಯೆಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

3. ಅರ್ಜಿದಾರರು ಇಚ್ಛಿಸಿದ ಒಂದು ಆಕರ್ಷಕ ನೋಂದಣಿ ಸಂಖ್ಯೆಯನ್ನು ಬಹಿರಂಗ ಹರಾಜಿನಲ್ಲಿ ಪಡೆದ ನಂತರ ಸದರಿ ಅರ್ಜಿದಾರರು ಮತ್ತೊಂದು ಆಕರ್ಷಕ ನೋಂದಣಿ ಸಂಖ್ಯೆಯನ್ನು ಪಡೆಯಲು ಇಚ್ಛಿಸಿದಲ್ಲಿ ಮತ್ತೊಂದು ಡಿಮಾಂಡ್ ಡ್ರಾಫ್ಟ್ ರೂ. 75,000/- ಗಳಿಗೆ ಸಲ್ಲಿಸಿದ ನಂತರ ಭಾಗವಹಿಸಲು ಅರ್ಹರಾಗುತ್ತಾರೆ.

4. ಸಾರಿಗೆ ಆಯುಕ್ತರಿಂದ ಅಧಿಕೃತಗೊಂಡ ಅಧಿಕಾರಿಯವರು, ಹರಾಜಿನಲ್ಲಿ ಭಾಗವಹಿಸುವ ಅರ್ಜಿದಾರರಿಗೆ ಟೋಕನ್ನಗಳನ್ನು ನೀಡಿ, ಮೇಲ್ಕಂಡಂತೆ ನಿಗದಿಪಡಿಸಿರುವ ಆಕರ್ಷಕ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜಿನ ಮೂಲಕ ಹೆಚ್ಚಿನ ಮೊತ್ತವನ್ನು ಬಿಡ್ಡು ಮಾಡಿದ ಅರ್ಜಿದಾರರಿಗೆ ಹಂಚಿಕೆ ಮಾಡಲಾಗುವುದು. ಈ ದಿಸೆಯಲ್ಲಿ ಸಾರಿಗೆ ಆಯುಕ್ತರಿಂದ ಅಧಿಕೃತಗೊಂಡ ಅಧಿಕಾರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.

5. ಯಶಸ್ವಿ ಬಿಡ್ಡುದಾರರು ಬಿಡ್ಡ್ ಮೊತ್ತಕ್ಕೆ (ಹರಾಜು ಪ್ರಕ್ರಿಯೆ ಮೊದಲು ಸಲ್ಲಿಸಿದ ರೂ.75,000/- ಡಿಮಾಂಡ್ ಡ್ರಾಫ್ಟ್ ಮೊತ್ತವನ್ನು ಹೊರತುಪಡಿಸಿ) ಕಾರ್ಯದರ್ಶಿ, ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದ ಡಿಮಾಂಡ್ ಡ್ರಾಫ್ಟ್ ಅನ್ನು ಹರಾಜು ನಡೆದ ನಂತರದ ಕಛೇರಿಯ ಎರಡು ಕರ್ತವ್ಯದ ದಿನಗಳೊಳಗಾಗಿ ಸಾರಿಗೆ ಆಯುಕ್ತರ ಕಛೇರಿಗೆ ಮಧ್ಯಾಹ್ನ 12.00 ಗಂಟೆಯೊಳಗೆ ಹಾಜರು ಪಡಿಸತಕ್ಕದ್ದು.

6. ಒಂದು ವೇಳೆ ಯಶಸ್ವಿ ಬಿಡ್‌ದಾರರು ಮೇಲ್ಕಂಡಂತೆ ನಿಗದಿತ ಅವಧಿಯಲ್ಲಿ ಬಹಿರಂಗ ಹರಾಜಿನಲ್ಲಿ ಮಾಡಿದ ಬಿಡ್ ಮೊತ್ತವನ್ನು ಸಲ್ಲಿಸಲು ವಿಫಲಾವದಲ್ಲಿ, ಹರಾಜಿನಲ್ಲಿ ಪ್ರಕ್ರಿಯಲ್ಲಿ ಭಾಗವಹಿಸಲು ಮೊದಲು ಸಲ್ಲಿಸಿದ ಡಿಮಾಂಡ್ ಡ್ರಾಫ್ಟ್ ಮೊತ್ತ ರೂ. 75,000/-ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಕಾಯ್ದಿರಿಸಿದ ನೋಂದಣಿ ಸಂಖ್ಯೆಯು ಪುನರ್-ಹಂಚಿಕೆಗಾಗಿ ಸಾರ್ವಜನಿಕರಿಗೆ ಮುಕ್ತವಾಗುತ್ತದೆ.

7. ಯಶಸ್ವಿ ಬಿಡ್ಡುದಾರರು ಬಿಡ್ಡ ಮಾಡಿದ ಸಂಪೂರ್ಣ ಮೊತ್ತವನ್ನು ಮೇಲ್ಕಂಡಂತೆ ನಿಗಧಿತ ಅವಧಿಯೊಳಗಾಗಿ ಸಲ್ಲಿಸಿದ ನಂತರ ಆಯ್ಕೆ ನೋಂದಣಿ ಸಂಖ್ಯೆ ಹಂಚಿಕೆ ಪತ್ರ ನೀಡಲಾಗುವುದು. ಸದರಿ ಹಂಚಿಕೆ ಪತ್ರ ನೀಡಿದ ದಿನಾಂಕದಿಂದ 90 ದಿನಗಳ ಒಳಗಾಗಿ ವಾಹನವನ್ನು ನೋಂದಾಯಿಸಿಕೊಳ್ಳತಕ್ಕದ್ದು.

--3

8. ಯಶಸ್ವಿ ಬಿಡ್‌ದಾರರು ಮೇಲ್ಕಂಡಂತೆ ಆಯ್ಕೆ ನೋಂದಣಿ ಸಂಖ್ಯೆಯನ್ನು ಹಂಚಿಕೆ ಪಡೆದ 90 ದಿನಗಳ ಒಳಗಾಗಿ ವಾಹನವನ್ನು ನೋಂದಾಯಿಸಲು ವಿಫಲವಾದಲ್ಲಿ, ಸದರಿ ಆಯ್ಕೆ ನೋಂದಣಿ ಸಂಖ್ಯೆ ಪಡೆಯಲು ಪಾವತಿಸಿದ ಬಿಡ್ ಮೊತ್ತ ಮತ್ತು ಶುಲ್ಕ ರೂ. 75,000/–ಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಹಾಗೂ ಸದರಿ ನೋಂದಣಿ ಸಂಖ್ಯೆಯು ಪುನರ್–ಹಂಚಿಕೆಗಾಗಿ ಸಾರ್ವಜನಿಕರಿಗೆ ಮುಕ್ತವಾಗುತ್ತದೆ.

ಈ ಕೆಳಕಂಡ ಕಛೇರಿಯಲ್ಲಿ ಪ್ರಾರಂಭಿಸಲಾಗುವ ಮುಂಗಡ ನೋಂದಣಿ ಶ್ರೇಣಿಗಳಲ್ಲಿ ಆಯ್ಕೆ ನೋಂದಣಿ ಸಂಖ್ಯೆಗಳನ್ನು ಬಹಿರಂಗ ಹರಾಜು ಪ್ರಕ್ರಿಯೆ ಮೂಲಕ **ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿಟಿಎಂಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560027** ಇಲ್ಲಿ ಹಂಚಿಕೆ ಮಾಡಲು ದಿನಾಂಕ ಮತ್ತು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ.

| ಕ್ರಮ ಸಂ. | ಕಛೇರಿಯ ಹೆಸರು | ಪ್ರಾರಂಭಿಸಲಾಗುವ ಮುಂಗಡ ಶ್ರೇಣಿ | ಬಹಿರಂಗ ಹರಾಜಿನ ದಿನಾಂಕ ಮತ್ತು ಸಮಯ |
|---|---|---|---|
| 1 | ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿ, ಯಲಹಂಕ ಬೆಂಗಳೂರು. | **KA-50/MD** | **ದಿನಾಂಕ: 18–04–2024**<br>ಸಮಯ: ಮಧ್ಯಾಹ್ನ 12.00 ಗಂಟೆಗೆ |

ಸಾರ್ವಜನಿಕರು ಮೇಲೆ ನಿಗಧಿಪಡಿಸಿದ ದಿನಾಂಕದಂದು ನಿರ್ದಿಷ್ಟಪಡಿಸಿದ ಸಮಯಕ್ಕೆ ಮೊದಲು ಹಾಜರಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ತಿಳಿಸದೆ.

**"ಸಾರಿಗೆ ಆಯುಕ್ತರ ಆದೇಶದ ಮೇರೆಗೆ"**

**ಅಪರ ಸಾರಿಗೆ ಆಯುಕ್ತರು,**
**(ಪ್ರವರ್ತನ)(ದಕ್ಷಿಣ), ಬೆಂಗಳೂರು**

**ಇವರಿಗೆ**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸದರಿ ಅಧಿಸೂಚನೆಯನ್ನು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 200 ಪ್ರತಿಗಳನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ಬೆಂಗಳೂರು ಇವರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿಗಳು :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಸಾರಿಗೆ ಆಯುಕ್ತರು, ಪರಿಸರ ಮತ್ತು ಇ ಆಡಳಿತ ಇವರಿಗೆ ಇಲಾಖೆಯ ಅಧಿಕೃತ ವೈಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
3. ರಾಜ್ಯದ ಎಲ್ಲಾ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಎಲ್ಲಾ ಅಪರ ಮತ್ತು ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ.